**ಅಸಲು ದಾವಾ ಸಂಖ್ಯೆ-27/2018** ಪಿ.ಡಬ್ಲ್ಯೂ:- **1**

ದಿನಾಂಕಃ **16.07.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದೇವಿರಮ್ಮ ಮರಣ ಶಾಸನವನ್ನು 1995-96 ನೇ ಸಾಲಿನಲ್ಲಿ ಬರೆದುಕೊಟ್ಟಿರುತ್ತಾರೆ. ಆದರೆ ನಿರ್ದಿಷ್ಟವಾದ ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. ನಿಪಿ-4 ಮರಣ ಶಾಸನದಲ್ಲಿ ನಮೂದಾಗಿರುವ ಸಂಪೂರ್ಣ ಮಾಹಿತಿ ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಹೆಸರಿಗೆ ಸರ್ವೇ ನಂ.19/1 ರಲ್ಲಿ 1 ಎಕರೆ ಜಮೀನನ್ನು ಬರೆದುಕೊಟ್ಟಿರುವ ಬಗ್ಗೆ ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಒಟ್ಟು 2 ಎಕರೆ 13 ಗುಂಟೆ ಜಮೀನು ಇರುತ್ತದೆ. ಅದರಲ್ಲಿ ನನ್ನ ಹೆಸರಿಗೆ 1 ಎಕರೆ ಜಮೀನು ಮತ್ತು ಪ್ರತಿವಾದಿಯ ಹೆಸರಿಗೆ 1 ಎಕರೆ 13 ಗುಂಟೆ ಜಮೀನನ್ನು ಬರೆದುಕೊಟ್ಟಿರುತ್ತಾರೆ. ನಿಪಿ-4 ಮರಣ ಶಾಸನವನ್ನು ದೇವಿರಮ್ಮ ನನ್ನ ಹೆಸರಿಗೆ, 1 ನೇ ಪ್ರತಿವಾದಿಯ ಹೆಸರಿಗೆ ಮತ್ತು ವೀರಪ್ಪರವರ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ನಿಪಿ-4 ಮರಣ ಶಾಸನದ ಬಗ್ಗೆ ವೀರಪ್ಪರವರಿಗೆ ಮಾಹಿತಿ ಇರುತ್ತದೆ. ದೇವಿರಮ್ಮರವರು ನನ್ನ ಹೆಸರಿಗಾಗಲೀ ಅಥವಾ ವೀರಪ್ಪರವರ ಹೆಸರಿಗಾಗಲೀ ನಿಪಿ-4 ಮರಣ ಶಾಸನಮರಣ ಶಾಸನಮರಣ ಶಾಸನವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ 1 ಆರ್ ಟಿ ಸಿ ಯನ್ನು ತೋರಿಸಿ ಸದರಿ ಆರ್ ಟಿ ಸಿ ಸರ್ವೇ ನಂ.19/1 ಕ್ಕೆ ಸಂಬಂಧಪಟ್ಟಿದ್ದು ಮತ್ತು ಅದರಲ್ಲಿ 2 ಎಕರೆ 13 ಗುಂಟೆ ಜಮೀನಿನ ಸ್ವಾಧೀನದಾರರ ಮತ್ತು ಖಾತೆದಾರರ ಹೆಸರು ಹಾಲಮ್ಮ ಎಂದು ನಮೂದಾಗಿರುವ ಬಗ್ಗೆ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಸದರಿ ಆರ್ ಟಿ ಸಿ ಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಪಿ-4 ಮರಣ ಶಾಸನಕ್ಕೆ ಪಟೇಲ್ ಬಸಪ್ಪ, ಸದಾಶಿವಪ್ಪ, ಚಂದ್ರಪ್ಪ, ಶೇಖರಪ್ಪ, ಆನಂದ ರವರು ಸಾಕ್ಷಿದಾರರಾಗಿ ಸಹಿಯನ್ನು

ಮಾಡಿರುತ್ತಾರೆ. ಈಗ ಮೇಲ್ಕಂಡ ಸಾಕ್ಷಿದಾರರು ತೀರಿಕೊಂಡಿರುತ್ತಾರೆ. ನಿಪಿ-4 ಮರಣ ಶಾಸನಕ್ಕೆ ಸಂಬಂಧಪಟ್ಟಂತೆ 1995-96 ರಿಂದ 2018 ರವರೆಗೆ ಸಕ್ಷಮ ಫ್ರಾಧೀಕಾರದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ 2013 ರಲ್ಲಿ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 1995-96 ರಿಂದ 2018 ರವರೆಗೆ ನಿಪಿ-4 ಮರಣ ಶಾಸನವನ್ನು ಯಾವುದೇ ಸಕ್ಷಮ ಫ್ರಾಧೀಕಾರದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. ನಿಪಿ-4 ರಲ್ಲಿ ದೇವಿರಮ್ಮನ ಮೊಮ್ಮಗ ಎಂದು ನನ್ನ ಹೆಸರು ನಮೂದಾಗಿದೆಯೇ ಹೊರತು ಮಗಳ ಅಥವಾ ಮಗನ ಮಗ ಎಂದು ನಮೂದಾಗಿಲ್ಲ ಎಂದರೆ ಸಾಕ್ಷಿಯು ತಂಗಿಯ ಮಗ ಎಂದು ನಮೂದಾಗಿದೆ ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ನನ್ನ ಹೆಸರು ಕೇವಲ ಮೊಮ್ಮಗ ಎಂದು ನಮೂದಾಗಿರುತ್ತದೆ ಹೊರತು ತಂಗಿಯ ಮಗ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. 2024 ನೇ ಸಾಲಿನಲ್ಲಿ ಪ್ರತಿವಾದಿಯ ತಾಯಿ ಮತ್ತು ಪ್ರತಿವಾದಿಯ ಮಕ್ಕಳು ದಾವಾ ಆಸ್ತಿಯನ್ನು ಸೇರಿಸಿ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.